ದಿನಾಂಕ **:** 06.04.2024 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣವಚನ ಬೋಧಿಸಲಾಯಿತು.

**ಪಾಟೀ ಸವಾಲು ಃ ಪ್ರತಿವಾದಿಯ ಪರವಾಗಿ ಶ್ರೀ ಕೆ.ಪಿ. ವಕೀಲರಿಂದ ಃ**

*ಈ ಕೇಸಿನ ಪ್ರತಿವಾದಿಗಳು ಏನು ತಕರಾರು ಹಾಕಿದ್ದಾರೆಂದು ನಾನು ತಿಳಿದುಕೊಂಡಿದ್ದೇನೆ . ದಾವಾಆಸ್ತಿಯಲ್ಲಿ ನಾವು ಸ್ವಾ ಧೀನ ಹೊಂದಿದ್ದೇವೆಂದು ತಕರಾರು ಹಾಕಿದ್ದಾರೆ . ಸರ್ವೆ ನಂ.**19** ರಲ್ಲಿ ಒಟ್ಟು **8** ಎಕರೆ **23** ಗುಂಟೆ ಆಸ್ತಿ ಇದೆ ಎಂದರೆ ಸರಿ . ಅದು ಸರ್ಕಾರಿ ಜಮೀನು ಆಗಿದ್ದು ದಾಖಲಾತಿಗಳಲ್ಲಿ ಕರಾಬು ಹುಲ್ಲುಬನೆ ಎಂದು ಉಲ್ಲೇಖವಿದೆ ಎಂದರೆ ಸರಿ . ಸರ್ವೆ ನಂ.**19** ರಲ್ಲಿ ಇರುವ **8** ಎಕರೆ **23** ಗುಂಟೆ ಆಸ್ತಿಗೂ ನನಗೂ ಸಂಬಂಧವಿರುವುದಿಲ್ಲ. ಸದರಿ ಆಸ್ತಿಯ ಪೈಕಿ **1** ಎಕರೆ ಜಮೀನಿಗೆ ಚೆಕ್ಕುಬಂದಿ ಪೂ : ನನ್ನ ತಂದೆ ಆಸ್ತಿ, ಪ : ಸರ್ವೆ ನಂ.**19** , ಉ : ಕರಾಬು ಜಮೀನು ಮತ್ತು ದ : ಇನಾಮತಿ ಮತ್ತು ಸದರಿ ಚೆಕ್ಕುಬಂದಿ ಆಸ್ತಿಯಲ್ಲಿ **1** ನೇ ಪ್ರತಿವಾದಿಯವರು ಸ್ವಾ ಧೀನ ಹೊಂದಿರುತ್ತಾರೆಂದರೆ ಸರಿಯಲ್ಲ . ಸದರಿ ಆಸ್ತಿಯ ಸಂಬಂಧ **1** ನೇ ಪ್ರತಿವಾದಿಯವರು ಆಸ್ತಿ ಮಂಜೂರಾತಿಗಾಗಿ ಸರ್ಕಾರಿ ಸುತ್ತೋಲೆಯ ಮೇರೆಗೆ ಅರ್ಜಿ ಹಾಕಿದ್ದಾರೆಂದರೆ ಸರಿಯಲ್ಲ. ಸದರಿ ಅರ್ಜಿಯ ಆಧಾರದ ಮೇಲೆ ದಿ .**21.04.1999** ರಂದು ಸರ್ಕಾರಿ ಅಧಿಕಾರಿಗಳು ಹಿಂಬರಹ ನೀಡಿದ್ದು ಅದರ ನಂಬರ್ **8118** ಎಂದರೆ ನನಗೆ ಗೊತ್ತಿಲ್ಲ. ಸರ್ವೆ ನಂ.**19** ರ ಚೆಕ್ಕುಬಂದಿ ನನಗೆ ಗೊತ್ತಿಲ್ಲ. ಸಾಕ್ಷಿ ಮುಂದುವರೆದು ಅಂತಹ ಆಸ್ತಿ ಇಲ್ಲ ಮತ್ತು ಸದರಿ ಆಸ್ತಿಗೂ ನನಗೂ ಸಂಬಂಧವಿಲ್ಲ ಎಂದು ಹೇಳುತ್ತಾರೆ.*

***2*** *ನೇ ಪ್ರತಿವಾದಿ ಕೃಷಿಕರು ಮತ್ತು ನಮ್ಮ ಊರಿನಲ್ಲಿ ವಾಸವಿದ್ದಾರೆಂದರೆ ಸರಿ . ಸರ್ವೆ ನಂ .**1** ಚಿಕ್ಕಕೊಂಡಮರಿ ಸರ್ಕಾರದ ಗೋಮಾಳದ ಆಸ್ತಿ ಎಂದರೆ ಸರಿ. ಸರ್ವೆ ನಂ.**1** ರಲ್ಲಿ ಬಹಳ ಜನ*

ಸ್ವಾಧೀನ ಹೊಂದಿದ್ದಾರೆ ಆದರೆ ಅವರುಗಳ ಹೆಸರು ಗೊತ್ತಿಲ್ಲ ಮತ್ತು ಅವುಗಳಲ್ಲಿ ಕರಾಬು ಜಮೀನು ಸಹ ಇದೆ. ಸರ್ವೆ ನಂ.1 ರ ಮೂರು ಎಕರೆ ಆಸ್ತಿಯಲ್ಲಿ 2ನೇ ಪ್ರತಿವಾದಿಯವರು ಸ್ವಾಧೀನ ಹೊಂದಿರುತ್ತಾರೆಂದರೆ ಸರಿಯಲ್ಲ. ಸರ್ವೆ ನಂ.1 ರ ಚೆಕ್ಕುಬಂದಿ ನನಗೆ ಗೊತ್ತಿಲ್ಲ. ಸರ್ವೆ ನಂ.1 ಸುಮಾರು ಆಸ್ತಿ ಇದೆ ಆದರೆ ನಿಖರವಾದ ವಿಸ್ತೀರ್ಣ ನನಗೆ ಗೊತ್ತಿಲ್ಲ. 2ನೇ ಪ್ರತಿವಾದಿ ಏನು ತಕರಾರು ಸಲ್ಲಿಸಿದ್ದಾರೆಂದು ನಾನು ತಿಳಿದುಕೊಂಡಿರುವುದಿಲ್ಲ. ಸರ್ವೆ ನಂ.1 ರ ಮೂರು ಎಕರೆ ಆಸ್ತಿಗೆ ಚೆಕ್ಕುಬಂದಿ ಪೂಃ ವೆಂಕಟಮ್ಮ, ಪ ಃ ರಸ್ತೆ, ಉ ಃ ಕರಾಬು ಮತ್ತು ದ ಃ ಕಾಲುವೆ, ಆನಂತರ ನನ್ನ ತಂದೆಯವರ ಆಸ್ತಿ ಎಂದರೆ ಸರಿಯಲ್ಲ. ಸರ್ವೆ ನಂ.1 ರಲ್ಲಿ ಜಂಬು ನೇರಳೆ, ನೀಲಗಿರಿ, ಸಿಲ್ವರ್ ಮರ, ಹೊಂಗೇಮರಗಳು ಇವೆ ಎಂದರೆ ಸರಿ, ಅವುಗಳನ್ನು ನಮ್ಮವರು ಹಾಕಿದ್ದಾರೆ. ಸರ್ವೆ ನಂ.1 ರಲ್ಲಿ ನಾನು ಸ್ವಾಧೀನ ಇರುವುದಿಲ್ಲ. ಸರ್ವೆ ನಂ.1 ಕ್ಕೂ ನನಗೂ ಯಾವುದೇ ಸಂಬಂಧವಿರುವುದಿಲ್ಲ. ಸರ್ವೆ ನಂ.1 ರಲ್ಲಿ ಇರುವ ಮರಗಳಿಗೆ 20 ವರ್ಷಕ್ಕೂ ಹೆಚ್ಚು ವಯಸ್ಸಾಗಿದೆ ಎಂದರೆ ಸಾಕ್ಷಿಯು ಇಲ್ಲ, 5 ರಿಂದ 6 ವರ್ಷ ಆಗಿದೆ ಮತ್ತು ಅವುಗಳನ್ನು ನಾವು ಹಾಕಿದ್ದೇವೆಂದು ಹೇಳುತ್ತಾರೆ. ಸದರಿ ಮರಗಳನ್ನು ನಾನು ಸರ್ವೆ ನಂ.14 ರಲ್ಲಿ ಹಾಕಿದ್ದೇನೆ. ಸರ್ವೆ ನಂ.14 ರ ಒಟ್ಟು ವಿಸ್ತೀರ್ಣ 34 ಗುಂಟೆ.

ಸರ್ವೆ ನಂ.14 ಮೂಲತಃ ಚೌಡಪ್ಪನವರಿಗೆ ಸೇರಿತ್ತು. ಅದರ ಪೈಕಿ 17 ಗುಂಟೆ ಚೌಡಪ್ಪನ ಹೆಸರಿನಲ್ಲಿದೆ, ಅದು ಕ್ರಯವಾಗಿದೆ. ಅದನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿದ್ದೇನೆ. ಗುಂಡುರಾವ್ ರವರ ಹೆಸರಿನಲ್ಲಿ ಉಳಿಕೆ 17 ಗುಂಟೆ ಆಸ್ತಿಯ ಖಾತೆ ಇದೆ. ಅದನ್ನು ಗುಂಡುರಾವ್ ರವರು ಚೌಡಪ್ಪನಿಂದ ಖರೀದಿ ಮಾಡಿರುತ್ತಾರೆ. ಗುಂಡುರಾವ್ ರವರು ಚೌಡಪ್ಪನಿಂದ 34 ಗುಂಟೆಯನ್ನು 1961 ರಲ್ಲಿ ಖರೀದಿ ಮಾಡಿರುತ್ತಾರೆ. ನನ್ನ ತಂದೆಯ ಹೆಸರಿಗೆ ಖಾತೆ ಕ್ರಯದ ಆಧಾರದ ಮೇಲೆ

ಬರುತ್ತದೆ. ನನ್ನ ತಂದೆ **34** ಗುಂಟೆ ಆಸ್ತಿಯನ್ನು ಖರೀದಿ ಮಾಡಿದ್ದು ಆ ಪೈಕಿ **17** ಗುಂಟೆ ಮಾತ್ರ ನನ್ನ ತಂದೆಯ ಹೆಸರಿನಲ್ಲಿ ಬರುತ್ತಿದ್ದು ಉಳಿಕೆ ಖಾತೆ ಆಸ್ತಿ ಖಾತೆ ಬರುತ್ತಿಲ್ಲ ಎಂದು ಎಲ್ಲಿಯೂ ಸಹ ಪ್ರಶ್ನೆ ಮಾಡಿರುವುದಿಲ್ಲ . ಸರ್ವೆ ನಂ.**14** ರ ಆಸ್ತಿಗೆ ಚೆಕ್ಕುಬಂದಿ ಪೂ: ಸುಬ್ಬಾರೆಡ್ಡಿ ಆದರ ಸರ್ವೆ ನಂ .**13/2**, ಪ : ಇ. ಷೆಡ್ಯೂಲ್ ದಾರ ಜಯಶ್ರೀ ಸೂರ್ಯಪ್ರಕಾಶ್, ಉ : ರಸ್ತೆ ಮತ್ತು ಸರ್ಕಾರಿ ಕುಂಟೆ ಆದರ ಸರ್ವೆ ನಂ.**79**, ದ : ಸರ್ವೆ ನಂ.**43**.

ದಿ.**19.04.1991** ರಂದು ಸರ್ವೆ ನಂ .**1** ರ ಮೂರು ಎಕರೆಆಸ್ತಿಯ ಮಂಜೂರಾತಿ ಕೋರಿ **2**ನೇ ಪ್ರತಿವಾದಿಯವರು ಸರ್ಕಾರದ ಸುತ್ತೋಲೆಯಂತೆ ಮಂಜೂರಾತಿಗಾಗಿ ಅರ್ಜಿ ಸಲ್ಲಿಸಿದ್ದು ಆ ಬಗ್ಗೆ **18351** ಎಂದು ಹಿಂಬರಹ ನೀಡಿದ್ದಾರೆಂದರೆ ಸರಿಯಲ್ಲ. ಸದರಿ ಆಸ್ತಿಯಲ್ಲಿ ಹಲವಾರು ವರ್ಷಗಳಿಂದ **2**ನೇ ಪ್ರತಿವಾದಿ ಮತ್ತು ಅವರ ಕುಟುಂಬ ಸ್ವಾ ಧೀನದಲ್ಲಿ ಇರುವ ಕಾರಣ ಆ ರೀತಿ ಅರ್ಜಿ ಹಾಕಿದ್ದಾರೆಂದರೆ ಸರಿಯಲ್ಲ . ನಂತರ ಅಧಿಕಾರಿಗಳು ಕಡತವನ್ನು ತಯಾರಿಸಿ ಸ್ಥಳಕ್ಕೆ ಸಂಬಂಧಪಟ್ಟ ಅಧಿಕಾರಿಗಳು ಸಹ ಬಂದಿದ್ದರು ಎಂದರೆ ಸರಿಯಲ್ಲ . ಸದರಿ ಅಧಿಕಾರಿಗಳು ಪರಿಶೀಲನೆ ಮಾಡಿ ಸರ್ವೆ ನಂ .**1** ರ ಮೂರು ಎಕರೆ ಆಸ್ತಿಯಲ್ಲಿ **2**ನೇ ಪ್ರತಿವಾದಿಯವರು ಸ್ವಾ ಧೀನ ಹೊಂದಿದ್ದಾರೆಂದು ವರದಿ ನೀಡಿದ್ದಾರೆಂದರೆ ಸರಿಯಲ್ಲ. ದಿ.**19.04.1991** ರ ಹಿಂಬರಹದ ಬಗ್ಗೆ ನಾನು ಪರಿಶೀಲನೆ ಮಾಡಿಲ್ಲ ಮತ್ತು ಪ್ರತಿವಾದಿಗಳು ಹೇಳಿರುವ ದಾಖಲಾತಿಗಳು ನಾನು ತೆಗೆದುಕೊಳ್ಳುವ ಪ್ರಯತ್ನ ಮಾಡಿಲ್ಲ. ನನ್ನ ಮತ್ತು **2**ನೇ ಪ್ರತಿವಾದಿಯ ಆಸ್ತಿಯ ನಡುವೆ ಪೂರ್ವ ಪಶ್ಚಿಮವಾಗಿ ಒಂದು ಕಾಲುವೆ ಹೋಗುತ್ತದೆ ಆದನ್ನು ಮರೆಮಾಚಿ ತಪ್ಪು ಚೆಕ್ಕುಬಂದಿ ನೀಡಿ ಸುಳ್ಳು ದಾವೆ ಹಾಕಿದ್ದೇನೆಂದರೆ ಸರಿಯಲ್ಲ.

ದಿ.**15.11.2001** ರಂದು ನಮ್ಮ ಕುಟುಂಬದವರು ಒಂದಾಗಿ ನಮ್ಮ ಒಮ್ಮತದಿಂದ ಒಂದು ವಿಭಾಗ ಮಾಡಿಕೊಂಡಿದ್ದೇವೆಂದರೆ ಸರಿ. ಅದನ್ನು ನೋಂದಣಿ ಮಾಡಿಸಿಲ್ಲ ಎಂದರೆ ಸರಿ . ದಿ.**15.11.2001** ಕ್ಕಿಂತ ಮೊದಲು ನಾವೆಲ್ಲರೂ ಒಟ್ಟು ಕುಟುಂಬದಲ್ಲಿ ಇದ್ದು ಸದರಿ ದಿನಾಂಕದಂದು ಮಾತ್ರ ವಿಭಾಗ ಮಾಡಿಕೊಂಡಿದ್ದೇವೆಂದರೆ ಸರಿ. ವಿಭಾಗಪತ್ರವಾದ ದಿನಾಂಕ ಚೆಕ್ಕುಬಂದಿ ತೋರಿಸುವ ದಾಖಲಾತಿ ನೀವು ಹೇಳಿರುವುದನ್ನು ಬಿಟ್ಟು ಬೇರೆ ಯಾವುದಾದರೂ ದಾಖಲಾತಿ ಇತ್ತಾ ಎಂದರೆ ಸಾಕ್ಷಿಯು ಯಾವ ಚೆಕ್ಕುಬಂದಿ ಇದೆ ಅದನ್ನೇ ಬರೆಸಿದ್ದೇವೆಂದು ಹೇಳುತ್ತಾರೆ. ದಾವಾಷೆಡ್ಯೂಲ್ ಎ ರಲ್ಲಿ ಉಲ್ಲೇಖಿಸಿರುವ **1** ನೇ ಆಸ್ತಿಯಲ್ಲಿ ಹೇಳಿರುವ ಚೆಕ್ಕುಬಂದಿಯನ್ನು ನಮ್ಮ ಕುಟುಂಬದವರು ವಿಭಾಗಪತ್ರವಾಗುವಾಗ ಹೇಳಿ ಬರೆಸಿರುವ ಚೆಕ್ಕುಬಂದಿ ಎಂದರೆ ಸರಿ. ಅದೇ ರೀತಿ **2** ನೇ ಆಸ್ತಿಗೂ ಸಹ ವಿಭಾಗಪತ್ರದಂತೆ ಚೆಕ್ಕುಬಂದಿ ಬರೆಯಲಾಗಿದೆ ಎಂದರೆ ಸರಿ. ಬಿ ಷೆಡ್ಯೂಲ್ ಆಸ್ತಿಗೆ ನೀವೇ ಚೆಕ್ಕುಬಂದಿ ಬರೆದಿದ್ದೀರಿ ಎಂದರೆ ಸಾಕ್ಷಿಯು ನಾವು ಬರೆದಿಲ್ಲ ಎಂದು ಹೇಳುತ್ತಾರೆ . ಸರ್ವೆ ನಂ.**19** ರ ಆಸ್ತಿಯ ಖಾತೆ ನಮ್ಮ ಕುಟುಂಬಕ್ಕೆ ಇರಲಿಲ್ಲ. ಸರ್ವೆ ನಂ.**19** ರ ಆಸ್ತಿಯನ್ನು ಮಂಜೂರಾತಿ ಕೋರಿ ಅರ್ಜಿ ಸಲ್ಲಿಸಿರುವುದಿಲ್ಲ. ಬಿ ಷೆಡ್ಯೂಲ್ ಆಸ್ತಿ ಸರ್ವೆ ನಂ.**19** ಕ್ಕೆ ಸಂಬಂಧಪಟ್ಟಿದೆ. ವಿಭಾಗಪತ್ರ ಆಗುವ ಮೊದಲು ಸರ್ವೆ ಮಾಡಿಸಿ ನಕಾಶೆಯ ಆಧಾರದ ಮೇಲೆ ವಿಭಾಗ ಮಾಡಿಕೊಂಡಿಲ್ಲ , ಆದರೆ ಆನಂತರ ಮಾಡಿಕೊಂಡಿದ್ದೇವೆ. ನಮ್ಮ ವಿಭಾಗಪತ್ರಕ್ಕೆ ಪ್ರತಿವಾದಿಗಳು ಪಕ್ಷಗಾರರಲ್ಲ ಎಂದರೆ ಸರಿ. ದಾವಾಆಸ್ತಿಗಳ ಸಂಬಂಧ ಪ್ರತಿವಾದಿಗಳು ಯಾವುದೇ ಪರಿಹಾರ ಕೋರಿಲ್ಲ ಎಂದರೆ ಸರಿಯಲ್ಲ . ನಮ್ಮ ಜಮೀನಿಗೆ ಅವರು ತಕರಾರು ಮಾಡಿಲ್ಲ ಎಂದರೆ ಸರಿಯಲ್ಲ.

ಊರಿನಲ್ಲಿ ನಮ್ಮ ತಂದೆ ಶಾನುಬೋಗರಾಗಿದ್ದರು ಮತ್ತು ನಮ್ಮದು ದೊಡ್ಡ ಕುಟುಂಬ ಎಂದರೆ ಸರಿ . ಪ್ರತಿವಾದಿಗಳು ಸಣ್ಣ ರೈತ ಕುಟುಂಬದವರು ಎಂದರೆ ಸರಿ. ಪ್ರತಿವಾದಿಗಳು ಸ್ವಾ ಧೀನದಲ್ಲಿ ಇರುವ ಸರ್ವೆ ನಂ.**19** ಮತ್ತು ಸರ್ವೆ ನಂ.**1** ರ ಆಸ್ತಿಯನ್ನು ಕಬಳಿಸಲು ನಮ್ಮ ಸರ್ವೆ ನಂಬರಿಗೆ ದಾವೆ

ಹಾಕಿ ತಪ್ಪು ಚೆಕ್ಕುಬಂದಿ ನೀಡಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆಂದರೆ ಸರಿಯಲ್ಲ . ದಾವಾಆಸ್ತಿಗಳು ಸರ್ವೆ ಮಾಡಿಸಲು ನನ್ನ ಅಭ್ಯಂತರವಿಲ್ಲ. ಪ್ರತಿವಾದಿಗಳು ಎ ಷೆಡ್ಯೂಲ್ ದಾವಾಆಸ್ತಿಗಳಿಗೆ ತೊಂದರೆ ನೀಡಿಲ್ಲ ಬದಲಾಗಿ ನಾನು ದಾವೆಯಲ್ಲಿ ತಪ್ಪು ಚೆಕ್ಕುಬಂದಿ ನೀಡಿದ ಕಾರಣ ಅವರು ತೊಂದರೆ ಮಾಡಿದ್ದಾರೆಂದರೆ ಸರಿಯಲ್ಲ . ಸರ್ವೆ ನಂ.**13/1** ರ ಉತ್ತರಕ್ಕೆ ರಸ್ತೆ ಇರುವ ಬಗ್ಗೆ ದಾಖಲಾತಿ ನೀಡಿಲ್ಲ ಎಂದರೆ ಸಾಕ್ಷಿಯು ಸರ್ವೆ ನಂ .**13/1** ಕ್ಕೆ ಉತ್ತರಕ್ಕೆ ರಸ್ತೆ ಇಲ್ಲ ಬದಲಾಗಿ ಸರ್ವೆ ನಂ .**14** ರ ಉತ್ತರಕ್ಕೆ ರಸ್ತೆ ಇದೆ ಎಂದು ಹೇಳುತ್ತಾರೆ . ಸರ್ವೆ ನಂ.**14** ರ ದಕ್ಷಿಣಕ್ಕೆ ರಸ್ತೆ ಇಲ್ಲ ಎಂದರೆ ಸಾಕ್ಷಿಯು ಕಾಲುದಾರಿ ಇದೆ ಎಂದು ಹೇಳುತ್ತಾರೆ . ಸದರಿ ಕಾಲುದಾರಿಯ ಸರ್ವೆ ನಂ.**13/1**. ಸದರಿ ಕಾಲುದಾರಿ ಊರಿನ ನಕಾಶೆಯಲ್ಲಿ ಇರುವುದಿಲ್ಲ.

ಚೌಡಪ್ಪನಿಂದ ಆಸ್ತಿ ಖರೀದಿಸಿದ ನಂತರ ಖಾತೆಯಾಗಿಲ್ಲ ಎಂದು ಪ್ರಶ್ನಿಸಿ ಚೌಡಪ್ಪನ ಕುಟುಂಬಸ್ಥರನ್ನು ಪಕ್ಷಗಾರರನ್ನಾಗಿ ಮಾಡಿರುವುದಿಲ್ಲ. ಚೌಡಪ್ಪನವರು ಕ್ರಯಪತ್ರ ಮಾಡಿಕೊಟ್ಟಿಲ್ಲ, ಹಾಗಾಗಿ ಖಾತೆಯಾಗಿಲ್ಲ ಎಂದರೆ ಸರಿಯಲ್ಲ. ಸರ್ವೆ ನಂ.**14** ರಲ್ಲಿ ನಮ್ಮ ಕುಟುಂಬಕ್ಕೆ ಕೇವಲ **17** ಗುಂಟೆ ಆಸ್ತಿ ಇದ್ದು ಅದು ಜಯಶ್ರೀ ಎಂಬುವವರ ಹೆಸರಿಗೆ ಖಾತೆ ಇದೆ ಎಂದರೆ ಸರಿ . ಸದರಿ ಜಯಶ್ರೀರವರಿಗೆ ಫವತಿವಾರಸು ಮೂಲಕ ಖಾತೆಯಾಗಿತ್ತು ಎಂದರೆ ಸರಿ. ಉಳಿಕೆ **17** ಗುಂಟೆ ಚೌಡಪ್ಪನ ಹೆಸರಿನಲ್ಲಿ ಇದೆ, ಆದರೆ **1961** ರಲ್ಲಿ ಕ್ರಯಪತ್ರವಾಗಿದೆ. ವಿಭಾಗಪತ್ರ ಆಗುವ ಪೂರ್ವದಲ್ಲಿ

*ಕ್ರಯಪತ್ರದಂತೆ ಖಾತೆಯಾಗಿಲ್ಲ ಎಂಬ ಕಾರಣಕ್ಕೆ ಖಾತೆ ಬದಲಾಯಿಸಿಕೊಂಡು ವಿಭಾಗಪತ್ರ ಮಾಡಿಕೊಳ್ಳಲು ಪ್ರಯತ್ನ ಮಾಡಿದ್ದೀರಾ ಎಂದರೆ ಸಾಕ್ಷಿಯು ಕಾರಣಾಂತರಗಳಿಂದ ಖಾತೆಯಾಗಿಲ್ಲ ಮತ್ತು ವಿಭಾಗಪತ್ರದಲ್ಲಿ ಅದನ್ನು ಸೇರಿಸಿದ್ದೇವೆ, ಅದು ನನಗೆ ಬಂದಿದೆ ಎಂದು ಹೇಳುತ್ತಾರೆ . ವಿಭಾಗಪತ್ರದಲ್ಲಿ 17 ಗುಂಟೆ ಆಸ್ತಿಗೆ ಚೌಡಪ್ಪನ ಹೆಸರಿನಲ್ಲಿ ಖಾತೆ ಇದೆ ಎಂದು ಉಲ್ಲೇಖ ಇರುವುದಿಲ್ಲ . ನಿಪಿ 1 ನ್ನು ಇದೇ ಮೊದಲ ಬಾರಿಗೆ ನ್ಯಾಯಾಲಯದಲ್ಲಿ ನೀಡುತ್ತಿದ್ದೇನೆಂದರೆ ಸರಿ . ನಿಪಿ 1 ಕ್ಕೆ ಸಂಬಂಧಪಟ್ಟಂತೆ ಇ.ಸಿ.ಯನ್ನು ಪಡೆದುಕೊಂಡಿಲ್ಲ. ಖಾತೆಯನ್ನು ನಿಪಿ 7 ರಲ್ಲಿ ವಿಭಾಗಪತ್ರದ ಪ್ರಕಾರ ಎಂದು ತೋರಿಸಲಾಗಿದೆ ಬದಲಾಗಿ ನೋಂದಣಿಯಾಗದ ವಿಭಾಗಪತ್ರ ಎಂ ದು ತೋರಿಸಿಲ್ಲ ಎಂದರೆ ಸರಿ . ವಿಭಾಗಪತ್ರವನ್ನು ನೋಂದಣಿ ಮಾಡಿಸಿಕೊಳ್ಳುವ ಪ್ರಯತ್ನ ಮಾಡಿಲ್ಲ. ಬಿ ಷೆಡ್ಯೂಲ್ ಆಸ್ತಿಯಂತೆ ದಾರಿ ಇಲ್ಲ, ಅದರಲ್ಲಿ ನಮಗೆ ಅಧಿಕಾರವಿಲ್ಲ ಎಂದರೆ ಸರಿಯಲ್ಲ. ಎ ಷೆಡ್ಯೂಲ್ ಆಸ್ತಿಯ ಚೆಕ್ಕುಬಂದಿ ತೋರಿಸಲು ಯಾವುದೇ ದಾಖಲಾತಿಯನ್ನು ಹಾಜರುಪಡಿಸಿಲ್ಲ ಮತ್ತು ಸದರಿ ಆಸ್ತಿಗಳ ವಿಸ್ತೀರ್ಣಕ್ಕೆ ತಕ್ಕಂತೆ ಪ್ರತಿವಾದಿಗಳು ಯಾವುದೇ ತಕರಾರು ಮಾಡಿಲ್ಲ ಎಂದರೆ ಸರಿಯಲ್ಲ . ಸುಳ್ಳು ಪ್ರಮಾಣಪತ್ರ ಸಲ್ಲಿಸಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆಂದರೆ ಸರಿಯಲ್ಲ.*

**ಮರು ವಿಚಾರಣೆಃ ಇಲ್ಲ.**

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಗಣಕೀಕರಿಸಲಾಯಿತು).**

ಓದಿ ಹೇಳಿ ಕೇಳಿ ಸರಿಯಾಗಿದೆ.

(ಮನು ಬಿ.ಕೆ.)
ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು
ಜೆಎಂಎಫ್‌ಸಿ, ಶ್ರೀನಿವಾಸಪುರ